MYSORE LEGISLATIVE ASSEMBLY

TWENTY-THIRD DAY.

Tuesday, 10th July 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Construction of a Building for High School at Begur in Bangalore South Taluk.

*Q.—84. Sri D. MUNICHINNAPPA (Bangalore South).—

Will the Government be pleased to state:—

(*a*) whether they are aware of the inconvenience caused to the students for want of a High School Building at Begur in Bangalore South Taluk;

(*b*) whether they intend to take necessary steps to construct a building for the above High School as the same is now being run in a private building?

*A.—Sri S. R. KANTHI (Minister for Education).—

(*a*) The High School at Begur is an aided institution run by private management. The management has recently sought for Government grant towards construction of a suitable building for the High School.

(*b*) No. This is not a Government School.

ಶ್ರೀ ಡಿ. ಮುನಿಚಿನ್ನಪ್ಪ.—ಈಗ ಮೂರು ವರ್ಷಗಳಿಂದ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ಬೇಗೂರು ಗ್ರಾಮದಲ್ಲಿ ಆ ಊರಿನ ಗ್ರಾಮಸ್ಥರು ಒಂದು ಹೈಸ್ಕೂಲನ್ನು ನಡೆಸುತ್ತಾ ಇದ್ದು ಅದಕ್ಕೆ ಕಟ್ಟಡ ಇಲ್ಲದೆ ಬಹಳ ತೊಂದರೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

†ಶ್ರೀ ಎಸ್. ಆರ್. ಕಂಠಿ.—ಅದು ಖಾಸಗಿ ಶಾಲೆಯಾಗಿರುವುದರಿಂದ ಖಾಸಗಿಯವರೇ ಶಾಲೆಯ ಕಟ್ಟಡವನ್ನು ಕಟ್ಟಿಸಿಕೊಡಲು ಮುಂದೆ ಬರಬೇಕಾಗುತ್ತದೆ. ಆದ್ದರಿಂದ ಸರ್ಕಾರದವರು ಈ ಶಾಲೆಗೆ ಕಟ್ಟಡವನ್ನು ಕಟ್ಟುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಇ. ನಾರಾಯಣಗೌಡ.—ಅದಕ್ಕೆ ಧನ ಸಹಾಯವನ್ನು ಮಾಡಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಅವರಿಂದ ಪ್ರಪೋಸಲ್ಸ್ ಬಂದರೆ ಆ ಬಗ್ಗೆ ಯೋಚನೆ ಮಾಡುತ್ತೇವೆ.

ಶ್ರೀ ಬಿ. ನಂಜಪ್ಪ.—ಸರ್ಕಾರದವರು ಬಿಲ್ಡಿಂಗ್ ಗ್ರಾಂಟ್ ಎಷ್ಟು ಕೊಡುತ್ತಾರೆ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಬಿಲ್ಡಿಂಗ್ ಕಟ್ಟುವುದಕ್ಕೋಸ್ಕರ 50 ಪರ್ಸೆಂಟ್ ಧನ ಸಹಾಯವನ್ನು ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಖಾಸಗಿ ಜನ ನಡೆಸತಕ್ಕ ಸ್ಕೂಲುಗಳ ಕಟ್ಟಡಕ್ಕೋಸ್ಕರ ಎಷ್ಟು ಹಣವನ್ನು ಸರ್ಕಾರದವರು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ?

ಶ್ರೀ ಎಸ್. ಆರ್. ಕಂಠಿ.—ಅದು ಜನರಲ್ ಪ್ರಶ್ನೆಯಾಗುತ್ತದೆ. ಈಗ ನಮ್ಮ ಮುಂದೆ ಇರುವ ಪ್ರಶ್ನೆ ಬೇಗೂರು ಸ್ಕೂಲಿಗೆ ಮಾತ್ರ ಸಂಬಂಧಪಟ್ಟದ್ದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಖಾಸಗಿ ಶಾಲೆಗಳ ಕಟ್ಟಡಕ್ಕೋಸ್ಕರ ಎಷ್ಟು ಧನ ಸಹಾಯವನ್ನು ಕೊಡಬೇಕೆಂದು ಸರ್ಕಾರದ ಧೋರಣೆ ಇದೆ?

ಶ್ರೀ ಎಸ್. ಆರ್. ಕಂಠಿ.—ಖಾಸಗೀ ಶಾಲೆಗಳಿಗೆ ಸರ್ಕಾರದವರು ಧನ ಸಹಾಯವನ್ನು ಕೊಡುವುದಾದರೆ 50 ಪರ್ಸೆಂಟ್ ಕೊಡುತ್ತಾರೆ. ಕೊಡದೆ ಇದ್ದರೆ ಏನೂ ಕೊಡುವುದಿಲ್ಲ.

ಶ್ರೀ ಡಿ. ಮುನಿಚಿನ್ನಪ್ಪ.—ಸರ್ಕಾರದವರು ಶಾಲೆಯ ಕಟ್ಟಡಕ್ಕೋಸ್ಕರ ಧನ ಸಹಾಯವನ್ನು ಕೊಡುತ್ತಾರೆಂದು ಶಾಲೆಯನ್ನು ಪುರು ಮಾಡಿದರು. ಈಗ ಸರ್ಕಾರದವರು ಧನ ಸಹಾಯವನ್ನು ಕೊಡುವುದಿಲ್ಲವೆಂದು ಹೇಳಿದರೆ ಗ್ರಾಮಸ್ಥರಿಗೆ ತೊಂದರೆಯಾಗುವುದಿಲ್ಲವೇ?

ಶ್ರೀ ಎಸ್. ಆರ್. ಕಂಠಿ.—ತಾವು ತಿಳಿದು ಕೊಂಡಿರುವುದು ತಪ್ಪಾಗಿದೆ. ಏಕೆಂದರೆ ಪ್ರೈವೇಟಾಗಿ ಶಾಲೆಗಳನ್ನು ನಡೆಸತಕ್ಕವರು ಆ ಶಾಲೆಯ ಕಟ್ಟಡವನ್ನು ಕಟ್ಟಿಸುವುದಕ್ಕೆ ಅವರು ಎಷ್ಟು ಖರ್ಚು ಮಾಡುತ್ತಾರೆ ಎಂಬುದಕ್ಕೆ ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ತಯಾರಿಸಿ ಸರ್ಕಾರದವರಿಗೆ ಕಳುಹಿಸಿದರೆ ಆಗ 100ಕ್ಕೆ 50 ಭಾಗ ಹಣವನ್ನು ಕೊಡಬೇಕೇ ಅಥವಾ ಬೇಡವೇ ಎಂಬುದನ್ನು ಯೋಚನೆ ಮಾಡುತ್ತೇವೆ.

†Indicates that the remarks or speeches have not been revised by the member concerned.

Sri C. J. MUCKANNAPPA.—Is it a discritionary power vested in the Government or is it the policy of the Government to help these Schools ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು 50 ಪರ್ಸೆಂಟ್ ಕೊಡಬೇಕು ಎಂದು ಸರ್ಕಾರದ ಪಾಲಸಿ ಇದೆ. ಆದರೆ ಅದನ್ನು ಕೊಡಬೇಕೇ ಅಥವಾ ಬೇಡವೇ ಎಂಬುದನ್ನು ಸರ್ಕಾರದವರು ಯೋಚನೆ ಮಾಡುತ್ತಾರೆ.

ಶ್ರೀ ಎಸ್. ಎ. ಕೃಷ್ಣ.—ಮುನಿಸಿಪಲ್ ಹೈಸ್ಕೂಲುಗಳಿಗೂ ಗ್ರಾಂಟ್ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಹೌದು ಮುನಿಸಿಪಲ್ ಹೈಸ್ಕೂಲುಗಳಿಗೂ ಗ್ರಾಂಟ್ ಕೊಡುತ್ತೇವೆ.

ಶ್ರೀ ಎಸ್. ಎ. ಕೃಷ್ಣ.—ಖಾಸಗಿಯವರು ಶಾಲೆಯನ್ನು ಪ್ರಾರಂಭ ಮಾಡಿದ ಮೇಲೆ ಅದಕ್ಕೆ ಬೇಕಾದ ಕಟ್ಟಡವನ್ನು ಕಟ್ಟಲು ಸರ್ಕಾರದ ಧನ ಸಹಾಯವನ್ನು ಕೇಳಬೇಕಾದರೆ ಕಟ್ಟಡದ ಪ್ಲಾನು ಮತ್ತು ಎಸ್ಟಿಮೇಟ್‌ಗಳನ್ನು ಇಷ್ಟೇ ವರ್ಷಗಳಲ್ಲಿ ಸರ್ಕಾರಕ್ಕೆ ಕಳುಹಿಸಬೇಕೆಂದು ಏನಾದರೂ ಗೊತ್ತು ಮಾಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಇಷ್ಟೇ ವರ್ಷಗಳಲ್ಲಿ ಅದನ್ನು ಕಳುಹಿಸಬೇಕೆಂದು ನಿರ್ದಿಷ್ಟವಾಗಿ ಗೊತ್ತು ಮಾಡಿಲ್ಲ.

ಶ್ರೀ ಕೆ. ದೇವಯ್ಯ.—ಮುನಿಸಿಪಲ್ ಹೈಸ್ಕೂಲುಗಳಿಗೆ ಬಿಲ್ಡಿಂಗ್ ಗ್ರಾಂಟ್ ಕೊಡುತ್ತೇವೆ ಎಂದು ಹೇಳಿದಿರಿ. ಹಾಗಾದರೆ ಬೆಂಗಳೂರಿನಲ್ಲಿ ಗಾಂಧೀನಗರದಲ್ಲಿರುವ ಗರ್ಲ್ಸ್ ಹೈಸ್ಕೂಲಿಗೆ ಗ್ರಾಂಟನ್ನು ಕೊಟ್ಟಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಇಂಡಿವಿಜುಯಲ್ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಬೇಗೂರು ಗ್ರಾಮಕೆ ಹೈಸ್ಕೂಲನ್ನು ಸ್ಯಾಂಕ್ಷನ್ ಮಾಡಿದ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ಗ್ರಾಮಕ್ಕೆ ಹೈಸ್ಕೂಲನ್ನೇನೋ ಸರ್ಕಾರದವರು ಸ್ಯಾಂಕ್ಷನ್ ಮಾಡಿದ್ದಾರೆ. ಆದರೆ ಈಗ ಆ ಸ್ಕೂಲನಲ್ಲಿ ನೂರು ಮಕ್ಕಳು ಕೂಡ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ಸ್ಕೂಲನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಿದ ಮೇಲೆ ಅದಕ್ಕೆ ಬಿಲ್ಡಿಂಗ್ ಗ್ರಾಂಟ್ ಕೊಡುವುದಕ್ಕೆ ಇರತಕ್ಕ ಕಷ್ಟಗಳೇನು ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಸಹಾಯ ಮಾಡಬೇಕಾದ್ದನ್ನು ಮಾಡಬೇಕಾಗುತ್ತದೆ. ಇದರಲ್ಲಿ ಪ್ರಯಾರಿಟಿ ನೋಡಿಕೊಂಡು ಕೊಡಬೇಕಾಗುತ್ತದೆ. ಇದರ ಜೊತೆಗೆ ಅದಕ್ಕೆ ಧನ ಸಹಾಯವನ್ನು ಕೊಡಬೇಕೇ ಅಥವಾ ಬೇಡವೇ ಎಂಬುದನ್ನು ಸಹ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಬೇಗೂರು ಗ್ರಾಮದಲ್ಲಿರುವ ಹೈಸ್ಕೂಲಿಗೆ ಮೈಂಟೆನೆನ್ಸ್ ಗ್ರಾಂಟ್ ಕೊಡುತ್ತಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಮೈಂಟೆನೆನ್ಸ್ ಗ್ರಾಂಟ್ ಕೊಡಲೇಬೇಕು.

Misappropriation of Society Funds by the Secretary of Haralur Co-operative Society, Tumkur Taluk.

*Q.—134. **Sri K. LAKKAPPA** (Hebbur).—

Will the Government be pleased to state :—

(*a*) whether they are aware that the Secretary, Haralur Co-operative Society, Tumkur Taluk, has misappropriated the Society fund ;

(*b*) whether the Police have registered any case in this behalf and filed charge sheet and if not, the reasons therefor ;

(*c*) the amount misappropriated by the said Secretary ?

A.—**Sri RAMAKRISHNA HEGDE** (Minister for Co-operation and Development).

(*a*) Yes.

(*b*) Yes. Charge Sheets have been filed in respect of two items of misappropriation and falsification of amounts and investigation in respect of other items is in progress.

(*c*) Does not arise in view of reply to Clause (*b*).

ಶ್ರೀ ಕೆ. ಲಕ್ಕಪ್ಪ.—ಈ ಹರಳೂರು ಕೋಆಪರೇಟೀವ್ ಸೊಸೈಟಿಯಲ್ಲಿ ಎಷ್ಟು ಹಣ ದುರುಪಯೋಗವಾಗಿದೆ, ಇದರಲ್ಲಿ ಆ ಸೊಸೈಟಿಯ ಸೆಕ್ರೆಟರಿಯವರು ದುರುಪಯೋಗ ಮಾಡಿರತಕ್ಕ ಹಣವೆಷ್ಟು, ಈಗ ಅದರಲ್ಲಿ ಸಿಕ್ಕಿರುವ ಹಣವೆಷ್ಟು ?

† **Sri KONDAJJI BASAPPA** (Deputy Minister for Co-operation).—The audit is not complete. So the amount could not be ascertained and given.

ಶ್ರೀ ಕೆ. ಲಕ್ಕಪ್ಪ.—ಈಗ ಆ ಸೊಸೈಟಿಯಲ್ಲಿ ಆಡಿಟ್ ಮಾಡಿ ಕೇಸು ಹಾಕಿದ್ದೇವೆ ಎಂದು ಹೇಳಿದ್ದೀರಿ ಅದರಲ್ಲಿ ಎಷ್ಟು ಹಣ ದುರುಪಯೋಗವಾಗಿದೆ ಎಂದು ಕೇಸು ಹಾಕಿದ್ದೀರಿ ?

Sri KONDAJJI BASAPPA.—There are two chargesheets, one for Rs. 58-36 N.P. and another for Rs. 10-10 N.P.

Sri C. J. MUCKANNAPPA.—Is it not a fact that the same Secretary has misappropriated large sums of money and when he was transporting a lorry load of paddy the Police seized the stock and searched the godown ?

Sri KONDAJJI BASAPPA.—It has not been brought to the notice of the Government.